**ಕರ್ನಾಟಕ ಸರ್ಕಾರ**

**ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.**

**ಸಂ.ಕಂ/ಹಬ/ವಿವಾದ/11/2016-17** **ದಿ:17-09-2016**

| ವಾದಿಗಳು | ಪ್ರತಿವಾದಿಗಳು |
|---|---|
| ಎಂ.ಎಸ್.ವೀರೇಶ ತಂದೆ ಮಲ್ಲೇಶಪ್ಪ,<br>25 ನೇ ವಾರ್ಡ್, ಆಂಬಾನಗರ, ಸಿರುಗುಪ್ಪ. | ಗಂಗಪ್ಪ ತಂದೆ ಲೇಟ್ ಸಣ್ಣ ನಿಂಗಪ್ಪ<br>ಕುನ್ನಟಗಿ ಗ್ರಾಮ, ಸಿಂಧನೂರು ತಾಲೂಕು.<br>ರಾಯಚೂರು ಜಿಲ್ಲಾ. |

**ದಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಸಿರುಗುಪ್ಪ | 414/ಸಿ | 0-90 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಸಿರುಗುಪ್ಪ ಗ್ರಾಮದ ಸ,ನಂ:414/ಸಿ ವಿ:0-90 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ **ಶ್ರೀಮತಿ ಮೂಕಮ್ಮ ತಂದೆ ಲೇಟ್ ನಿಂಗಪ್ಪ** ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿನಾಂಕ:15-02-2007 ರಂದು ಮರಣ ಹೊಂದಿದ್ದು, ಸದ್ರಿಯವರ ಸಹೋದರ (ಅಣ್ಣ) **ಗಂಗಪ್ಪ ತಂದೆ ಲೇಟ್ ಸಣ್ಣ ನಿಂಗಪ್ಪ** ಎಂಬುವವರು ತಮ್ಮ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಕೋರಿದ್ದು, ಅದರಂತೆ ಕ್ರಮ ಜರುಗಿಸಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಸಿರುಗುಪ್ಪ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಯ ಮುಂಚೆ **ಎಂ.ಎಸ್.ವೀರೇಶ ತಂದೆ ಮಲ್ಲೇಶಪ್ಪ** ಇವರು ಅರ್ಜಿದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ದಿ:05-07-2016 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:239/15-16 ದಿ:20-07-2016 ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ನ್ಯಾಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:08-08-2016 ರಿಂದ ದಿ:26-08-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಲಾಗಿ, ದಾವಾ ಜಮೀನಿಗೆ ಸಂಭಂದಿಸಿ ಈ ಹಿಂದೆಯೇ ಮಾನ್ಯ ಸಹಾಯಕ ಆಯುಕ್ತರು ಬಳ್ಳಾರಿ ಇವರ ನ್ಯಾಯಾಲಯದಲ್ಲಿ ಲಕ್ಷ್ಮಮ್ಮ ಎಂಬುವವರು ಇವರು ದಾವೆ ಹೂಡಿದ್ದು, ಮಾನ್ಯರ ನ್ಯಾಯಾಲಯ ಪ್ರಕರಣ ಸಂಖ್ಯೆ:ಕಂ:ಅಪೀಲು:183/2008-09 ದಿ:15-03-2011 ರ ಪ್ರಕಾರ ಎಂ.ನಂ:263/2006-07 ದಿ:10-04-2007 ರ ಪ್ರಕಾರ ಮಾಡಿದ ಹಕ್ಕು ಬದಲಾವಣೆ ಆದೇಶ ರದ್ದುಗೊಳಿಸಿ, ಮೂಕಮ್ಮ ಇವರ ಹೆಸರನ್ನು ಮುಂದುವರೆಸಲು ಮತ್ತು ವಾದಿ, ಪ್ರತಿವಾದಿಗಳಿಗೆ ಹಕ್ಕಿನ ಬಗ್ಗೆ ಸಿವಿಲ್

ಸಿರುಗುಪ್ಪ

ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಪರಿಹಾರ ಕಂಡುಕೊಳ್ಳಲು ಆದೇಶ ಮಾಡಿದ್ದು, ಮಾನ್ಯ ಸಹಾಯಕ ಆಯುಕ್ತರವರ ಆದೇಶ ವಿರುದ್ಧ ಪ್ರಸ್ತುತ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಎಂ.ಎಸ್.ವೀರೇಶ ಮತ್ತು ಲಕ್ಷ್ಮಮ್ಮ ಇವರ ನಡುವೆ ಸಂ:ಕಂ:ಅಪೀಲು:48/2011-12 ಇನ್ನೂ ವಿಚಾರಣೆ ಬಾಕಿ ಇರುವುದರಿಂದ, ಮಾನ್ಯ ಜಿಲ್ಲಾಧಿಕಾರಿಗಳವರ ನ್ಯಾಯಾಲಯದಲ್ಲಿ ಪ್ರತಿವಾದಿಯು ತಮ್ಮನ್ನು ಸಹ ವಾದಿ/ಪ್ರತಿವಾದಿಯಾಗಿ ಸೇರ್ಪಡೆ ಮಾಡಿಕೊಳ್ಳಲು ಮನವಿ ಸಲ್ಲಿಸಿಕೊಳ್ಳಲು ಸೂಚಿಸಿ, ಮಾನ್ಯ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಸದ್ರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/11/2016-17** **ದಿ:17-09-2016**

**<u>ಆದೇಶ</u>**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಸಿರುಗುಪ್ಪ ಗ್ರಾಮದ ಸ,ನಂ:414/ಸಿ ವಿ:0-90 ಎಕ್ರೆ ಜಮೀನಿಗೆ ಸಂಭಂದಿಸಿ ಪ್ರಸ್ತುತ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ಇವರ ನ್ಯಾಯಾಲಯದಲ್ಲಿ ಪ್ರಕರಣ ಸಂ:ಕಂ:ಅಪೀಲು:48/2011-12 ಇನ್ನೂ ವಿಚಾರಣೆ ಬಾಕಿ ಇರುವುದರಿಂದ, ಮಾನ್ಯ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಈ ನ್ಯಾಯಾಲಯದ ಪ್ರಕರಣವನ್ನು ಮುಕ್ತಾಯಗೊಳಿಸಿ ವಹಿವಾಟನ್ನು ವಿಲೇಗೊಳಿಸಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:17-09-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ

2.ವಾದಿ-ಪ್ರತಿವಾದಿಗಳಿಗೆ

3.ಕಛೇರಿ ಕಡತಕ್ಕೆ